ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301

OFFICE OF THE DEPUTY COMMISSIONER, UTTARA KANNADA DISTRICT, KARWAR, -581 301

ದೂರವಾಣಿ : / Telephone: 08382 226406, 226471 / 08382 226603 (Fax)

Email: dckarwar@gmail.com

Website: http://uttara kannada.nic.in

ನಂ:ಜಿ.ಬಿ.ಡಿವಿಎಸ್/ಸಿಆರ್–62/2019–20 ದಿನಾಂಕ: 7 –02–2020.

## ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

**ವಿಷಯ:** ಉತ್ತರ ಕನ್ನಡ ಜಿಲ್ಲೆಯ 1 ದೇವಾಲಯದಲ್ಲಿ ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ವಧುಗಳಿಗೆ 8 ಗ್ರಾಮ ಚಿನ್ನದ ತಾಳಿ ಮತ್ತು 2 ಗುಂಡುಗಳು (22 ಕ್ಯಾರೆಟ್ 916 ಹಾಲ್ ಮಾರ್ಕ್ ಹೊಂದಿದ) ನೀಡಲು ಉದ್ದೇಶಿಸಿದ್ದು,ಆಸಕ್ತ ಸರಬರಾಜುದರದಿಂದ ಟೆಂಡರ್ ಅಹ್ವಾನಿಸುವ ಬಗ್ಗೆ.

**ಉಲ್ಲೇಖ:** 1)ಧಾರ್ಮಿಕ ದತ್ತಿ ಆಯುಕ್ತರು ಸುತತೋಲೆ ಸಂ:ಎಡಿ.ಎಂ:11ಸಿಆರ್ 136:2019–20 ದಿನಾಂಕ:22–11–2019 ಮತ್ತು ಪತ್ರ ದಿನಾಂಕ:10–01–2020 ಮತ್ತು ಪತ್ರ ದಿನಾಂಕ:10–01–2020
2)ಸರ್ಕಾರದ ಪತ್ರ ಸಂಖ್ಯೆ ಕಂಇ 22 ಮುಇವಿ 2019(ಇ)ದಿನಾಂಕ:11–11–2019

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ,ಧಾರ್ಮಿಕ ದತ್ತಿ ಆಯುಕ್ತರು ಬೆಂಗಳೂರು ಇವರ ಉಲ್ಲೇಖಿತ ದಿನಾಂಕ:22–11–2019 ರನ್ವಯ ಉತ್ತರ ಕನ್ನಡ ಜಿಲ್ಲೆಯ ಕೆಳಕಂಡ ದೇವಾಲಯಗಳಲ್ಲಿ ದಿನಾಂಕ:26–04–2020 ಮತ್ತು 24–05–2020 ರಂದು ಸಾಮೂಹಿಕ ವಿವಾಹಗಳನ್ನು ಆಯೋಜಿಸಲಾಗುವುದು.

| ಅನಂ | ದೇವಸ್ಥಾನದ ಹೆಸರು |
|---|---|
| 1 | ಶ್ರೀ ಮಾರಿಕಾಂಬಾ ದೇವಸ್ಥಾನ ತಾಲೂಕು: ಶಿರಶಿ |

ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ವಧುಗಳಿಗೆ ದೇವಾಲಯದ ನಿಧಿಯಿಂದ ಖರ್ಚು ಭರಿಸಿ 8 ಗ್ರಾಂ ತೂಕವುಳ್ಳ(ವೇಸ್ಟೇಜ್ ಮತ್ತು ಮಜೂರಿ ಸೇರಿ)ರೂ:40,000/–ರೊಳಗೆ ಬೆಲೆಯುಳ್ಳ ಒಂದು ಚಿನ್ನದ ತಾಳಿ ಮತ್ತು 2 ಚಿನ್ನದ ಗುಂಡುಗಳನ್ನು ಸರಬರಾಜು ಮಾಡಬೇಕಾಗಿದೆ.

ಸರ್ಕಾರದಿಂದ ಮಾನ್ಯತೆ ಪಡೆದ ಪರಿಣಿತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರ ಇ–ಪ್ರಕ್ಯೂರೆಮೆಂಟ್ ಪೋರ್ಟಲ್ www.eproe.karnataka.in ವೆಬ್ ಸೈಟ್‌ನಲ್ಲಿ ಟೆಂಡರ್ ಕರೆಯಲಾದ ವಿವರ ಕೆಳಕಂಡಂತಿದೆ

| | | |
|---|---|---|
| 1 | ಭರ್ತಿಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: | 25–02–2020 |
| 2 | ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: | 26–02–2020 |
| 3 | ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: | 28–02–2020 |
| 4 | ಅರ್ಹ ಎಜೆನ್ಸಿ ಆಯ್ಕೆ ಮಾಡುವ ಕೊನೆಯ ದಿನಾಂಕ: | 09–03–2020 |
| 5 | ಕಾರ್ಯಾದೇಶ ಹೊರಡಿಸುವ ದಿನಾಂಕ: | 01–04–2020 |
| 6 | ಟೆಂಡರ್‌ನಲ್ಲಿ ಆಯ್ಕೆಯಾದ ಎಜೆನ್ಸಿ ಚಿನ್ನದ ತಾಳಿ ಮತ್ತು ಚಿನ್ನದ 2 ಗುಂಡುಗಳನ್ನು ಸರಬರಾಜು ಮಾಡುವ ದಿನಾಂಕ: | 20–04–2020 |
| 7 | ಸಂದಾಯ ಮಾಡಬೇಕಾಗಿರುವ ಇ.ಎಂ.ಡಿ ಮೊತ್ತ ರೂ: | 1,00 ಲಕ್ಷ |

ಷರತ್ತುಗಳು:

1.ಚಿನ್ನದ ತಾಳಿ ಮತ್ತು ಚಿನ್ನದ ಗುಂಡುಗಳು ಸೇರಿ ಒಟ್ಟು ತೂಕ 8.00 ಗ್ರಾಮ (ವೇಸ್ಟೇಜ್ ಮತ್ತು ಮಜೂರಿ ಸೇರಿ) ದರ ನಮೂದಿಸುವುದು ತಾಳಿಗಳ ಸಂಖ್ಯೆಯನ್ನು ಸರಬರಾಜು ಆದೇಶ ನೀಡುವಾಗ ತಿಳಸಲಾಗುವುದು.

2.ಚಿನ್ನವು ಕಡ್ಡಾಯವಾಗಿ 22 ಕ್ಯಾರೆಟ್ (916 ಹಾಲ್ ಮಾರ್ಕ್) ಚಿನ್ನವಾಗಿರಬೇಕು ಮತ್ತು ಈ ಬಗ್ಗೆ ಅಗತ್ಯ ದೃಢೀಕರಣ ಪತ್ರ ನೀಡತಕ್ಕದ್ದು.

3. ಚಿನ್ನದ ತಾಳಿ ಮತ್ತು ಚಿನ್ನದ ಗುಂಡುಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರ್ ಸಲ್ಲಿಸುವ ಏಜೆನ್ಸಿಯವರು ಕಡ್ಡಾಯವಾಗಿ ಚಿನ್ನ ಮಾರಾಟದ ಪರವಾನಗಿ ಹೊಂದಿರಬೇಕು ಅದರ ಜೊತೆಗೆ ಜಿಎಸ್‌ಟಿ ಪ್ರಮಾಣ ಪತ್ರ ಪಾನ್ ಕಾರ್ಡ್ ಮತ್ತು ಆದಾಯ ತೆರಿಗೆ ಪಾವತಿ ರಿಟರ್ನ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.

4.ಆಯ್ಕೆಯಾದ ಟೆಂಡರದಾರರು ಚಿನ್ನದ ತಾಳಿ ಮತ್ತು ಚಿನ್ನದ ಗುಂಡುಗಳನ್ನು ಆದೇಶ ನೀಡಿದ ದಿನಾಂಕದಿಂದ 15 ದಿನಗಳಲ್ಲಿ ಆಯಾ ದೇವಸ್ಥಾನಕ್ಕೆ ಸರಬರಾಜು ಮಾಡತಕ್ಕದ್ದು ಮತ್ತು ಆಯಾ ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿಗಳು ಅದರ ದರವನ್ನು ನೇರವಾಗಿ ಪಾವತಿ ಮಾಡಲಿರುವರು

5.ಟೆಂಡರ್‌ದಾರರು ಅರ್ಜಿಯೊಂದಿಗೆ ರೂ:1.00 ಲಕ್ಷ ಭದ್ರತಾ ಠೇವಣಿಗೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಪಾವತಿಸಬೇಕು.

6.ಸರಬರಾಜು ಮಾಡಿದ ನಂತರ ಚಿನ್ನದ ಗುಣಮಟ್ಟವು ಕಡಿಮೆ ಇರುವದಾಗಿ ಅಥವಾ ಯಾವುದೇ ನ್ಯೂನ್ಯತೆ/ದೂರಗಳು ಬಂದಲ್ಲಿ ಅಂತಹ ಎಜೆನ್ಸಿಯವರ ವಿರುದ್ಧ ಕ್ರಮ ಜರುಗಿಸಲಾಗುವುದು.

7.ಟೆಂಡರ್ ಸ್ವೀಕರಿಸುವ ಅಧಿಕಾರಿಯವರು ಯಾವುದೆ ಕಾರಣ ನೀಡದೆ ಯಾವುದೆ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

8.ಸರಬರಾಜು ಆದೇಶದಲ್ಲಿ ಸೂಚಿಸಲಾದ ಐಟಂ ಗಳ ಸಂಖ್ಯೆಗಿಂತ ಹೆಚ್ಚು ಬೇಕಾದಲ್ಲಿ ಟೆಂಡರ್‌ನಲ್ಲಿ ಸೂಚಿಸಲಾದ ದರದಲ್ಲಿಯೇ ಸರಬರಾಜು ಮಾಡಲು ಬದ್ಧರಿರಬೇಕು.

9.ಟೆಂಡರ್ ಪಡೆದ ಸರಬರಾಜುದಾರರು ಯಾವುದೇ ಕಾರಣಕ್ಕೂ ಬೇರೆ ಸರಬರಾಜುದಾರರಿಗೆ ಉಪಗುತ್ತಿಗೆ ನೀಡತಕ್ಕದಲ್ಲ ಒಂದು ವೇಳೆ ಇಂತಹ ಘಟನೆಗಳು ಕಂಡುಬಂದಲ್ಲಿ ಟೆಂಡರ್‌ನ್ನು ರದ್ದು ಪಡಿಸಿ ಸಂಬಂಧಪಟ್ಟ ಸಂಸ್ಥೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಅಂತವರ ವಿರುದ್ಧ ಕಾನೂನು ರೀತಿ ಕ್ರಮಕೈಗೊಳ್ಳಲಾಗುವುದು.

10.ಟೆಂಡರ್‌ನಲ್ಲಿ ನಮೂದಿಸಲಾದ ಚಿನ್ನದ ಐಟಂ ಗಳ ದರಗಳನ್ನು ಯಾವುದೇ ಕಾರಣಕ್ಕೂ ಹೆಚ್ಚುಸುವದಾಗಲೀ ಬದಾಲಾಯಿಸುವದಕ್ಕಾಗಲೀ ಅವಕಾಶ ಇರುವುದಿಲ್ಲ.

11.ಕ್ರಮ ಸಂಖ್ಯೆ1 ರಿಂದ 10 ವರೆಗಿನ ಟೆಂಡರ್ ನಿಬಂಧನೆಗಳಿಗೆ ಬದ್ಧರಾಗಿರುವ ಬಗ್ಗೆ ಯಶಸ್ವಿ ಟೆಂಡರ್‌ದಾರರು ಸ್ವಂತ ಖರ್ಚಿನಲ್ಲಿ ರೂ.500/-ಗಳ ಕರಾರು ಪತ್ರ ಸಲ್ಲಿಸತಕ್ಕದ್ದು.

ಜಿಲ್ಲಾಧಿಕಾರಿ
ಉತ್ತರ ಕನ್ನಡ ಕಾರವಾರ

ಪ್ರತಿಯನ್ನು:

1.ಸರ್ಕಾರದ ಕಾರ್ಯದರ್ಶಿಗಳು,ಕಂದಾಯ ಇಲಾಖೆ(ಮುಜರಾಯಿ)ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ.

2.ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಚಾಮರಾಜಪೇಟೆ,ಬೆಂಗಳೂರು ಇವರಿಗೆ ಕಳುಹಿಸಿ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

3.ಆಪ್ತ ಕಾರ್ಯದರ್ಶಿಗಳು,ಮಾನ್ಯ ಮುಜರಾಯಿ ಸಚಿವರ ಸಚಿವಾಲಯ,ವಿಧಾನಸೌಧ,ಬೆಂಗಳೂರು ಇವರ ಮಾಹಿತಿಗಾಗಿ.

4.ಉಪ ಕಾರ್ಯದರ್ಶಿಗಳು ಹಾಗೂ ರಾಜ್ಯ ಟೆಂಡರ್ ಬುಲೆಟನ್‌ನಲ್ಲಿ ಅಧಿಕಾರಿಗಳು,ಕಂದಾಯ ಇಲಾಖೆ (ಮುಜರಾಯಿ) ಬೆಂಗಳೂರು ಇವರಿಗೆ ಕಳುಹಿಸಿ,ರಾಜ್ಯ ಟೆಂಡರ್ ಬುಲೆಟನ್‌ನಲ್ಲಿ ಇವರಿಗೆ ಪ್ರಕಟಿಸಲು ಕೋರಿದೆ.

5.ಉಪವಿಭಾಗಾಧಿಕಾರಗಳು.ಸಹಾಯಕ ಕಮೀಷನರ ಶಿರಶಿ ಇವರ ಮಾಹಿತಿಗಾಗಿ.

6.ಅಧ್ಯಕ್ಷರು ಶ್ರೀ ಮಾರಿಕಾಂಬಾ ದೇವಸ್ಥಾನದವರಿಗೆ ಮಾಹಿತಿಗಾಗಿ

7.ಡಿಸ್ಟಿಕ್ ಇನಫಾರ್ಮೆ ಆಫಿಸರ್.ಎನ್.ಐ.ಸಿ.ಜಿಲ್ಲಾ ಪಂಚಾಯತ್.ಉ.ಕ ಕಾರವಾರ ಇವರಿಗೆ ಸದರಿ ಪ್ರಕಟನೆಯನ್ನು www.eproe.karnataka.in ವೆಬ್ ಸೈಟ್‌ನಲಿ ಅಳುಪಡಿಸಲು ಕಳುಹಿಸಿದೆ.

8.ಸೀನಿಯರ ಪ್ರೋಗ್ರಾಮ್ ಜಿಲ್ಲಾ ನಗರಾಭಿವೃದ್ಧಿ ಕೋಶ,ಕಾರವಾರ ಇವರಿಗೆ ಸೂಕ್ತಕ್ರಮಕ್ಕಾಗಿ ಕಳುಹಿಸಿದೆ.

9.ಈ ಕಾರ್ಯಾಲಯದ ಟೆಂಡರ್ ಬುಲೇಟನ್ ವಿಭಾಗಕ್ಕೆ-ವಾರಾಂತ್ಯದ ಟೆಂಡರ್ ಬುಲೇಟ್‌ನಲ್ಲಿ ಪ್ರಕಟಿಸಲು ಕಳುಹಿಸಿದೆ.

10. ಸಹಾಯಕ ನಿರ್ದೇಶಕರು ವಾರ್ತೆ ಮತ್ತು ಸಂಪರ್ಕ ಇಲಾಖೆ ವಾರ್ತಾಭವನ ಕಾರವಾರ.

11) ಸಂಪರ್ಕಿಸುವ ದೂರವಾಣಿ ಸಂಖ್ಯೆ :- 8095015856